
# ಮೆದುಳಿನ ರಕ್ತನಾಳಗಳ ದೋಷ:
## ಸ್ಟ್ರೋಕ್‌ನ್ನು ತಡೆಗಟ್ಟಬಹುದು ಹಾಗು ಗುಣಪಡಿಸಬಹುದು.

**60 ವರ್ಷಗಳಿಗಿಂತ ಮೇಲ್ಪಟ್ಟ ಜನರಿಗೆ, ಡಯಾಬಿಟಿಸ್, ಉಚ್ಚ ರಕ್ತದೊತ್ತಡ, ರಕ್ತದಲ್ಲಿ ಕೊಬ್ಬಿನಾಂಶ ಜಾಸ್ತಿಯಾಗುವುದು ಸಾಮಾನ್ಯ. ಈ ರೀತಿಯ ರೋಗಗಳಿಂದ ಜನರು ಮೆದುಳಿನ ರಕ್ತನಾಳದ ತೊಂದರೆಗೆ ಒಳಗಾಗುವ ಸಾಧ್ಯತೆಗಳಿರುತ್ತವೆ. ಈ ರಕ್ತನಾಳದ ತೊಂದರೆಯಿಂದ ಸ್ಟ್ರೋಕ್ ಆಗುವುದು / ಮೆದುಳಿನ ರಕ್ತ ಹೆಪ್ಪುಗಟ್ಟುವುದು / ರಕ್ತಸ್ರಾವವಾಗುವುದು / ಕೈಕಾಲುಗಳಲ್ಲಿ ಬಲಹೀನತೆಯಾಗುವುದು / ಬುದ್ಧಿ ಭ್ರಮಣೆಯಾಗುವುದು / ವಿಪರೀತ ತಲೆನೋವು ಉಂಟಾಗುವ ಸಾಧ್ಯತೆಗಳಿರುತ್ತವೆ. ಈ ರೀತಿ ರೋಗವಿರುವ ಜನರನ್ನು ಪರೀಕ್ಷಿಸಿ ಮುಂದೆಯಾಗುವ ತೊಂದರೆಗಳನ್ನು ತಡೆಗಟ್ಟಬಹುದು ಹಾಗೂ ತೊಂದರೆಗೊಳಗಾದವರನ್ನು ಗುಣಪಡಿಸಬಹುದು. ಅತ್ಯಾದುನಿಕವಾದ ಔಷದಿಗಳು ಹಾಗು ಉಪಕರಣಗಳಿಂದ ಈ ರೀತಿಯ ತೊಂದರೆಗಳನ್ನು ನಿವಾರಿಸಬಹುದು ಹಾಗು ಗುಣಪಡಿಸುವ ಸಾಧ್ಯತೆಗಳಿವೆ ಎಂದು ಮೆದುಳಿನ ರಕ್ತನಾಳದ ತಜ್ಞರು ಹೇಳುತ್ತಾರೆ.**




### ಮೆದುಳಿನ ರಕ್ತನಾಳಗಳ ಸಮಸ್ಯೆ:
ಮೆದುಳಿನ ರಕ್ತನಾಳಗಳ ತೊಂದರೆಯಿಂದಾಗುವ ಸ್ಟ್ರೋಕ್ ಭಾರತದಲ್ಲಿ ವೃದ್ದರಲ್ಲಿ ಮಾತ್ರವಿದೆ 2ನೇ ತೀರಾ ಸಾಮಾನ್ಯವಾದ ಕಾರಣ ಮತ್ತು ಅವಲಂಬಿತ ಜೀವನದ ಮೊದಲನೆ ಕಾರಣ ಹಾಗು ಪ್ರೌಢ ಹಾಗು ಮದ್ಯಮ ವಯಸ್ಕರಲ್ಲಿ ಆಗುವ ಅಶಕ್ತತೆ ಹಾಗೂ ಕೈ ಕಾಲುಗಳಲ್ಲಿ ಬಲಹೀನತೆಗೆ ನಂ.1 ಕಾರಣ ಮೆದುಳು ದೇಹದ ಎಲ್ಲಾ ಭಾಗಗಳಿಗಿಂತ ಅತಿ ಹೆಚ್ಚು ರಕ್ತವನ್ನು ಪಡೆಯುವ ಅಂಗ. ಹೃದಯದ ಭಾಗಶಃ 20% ರಕ್ತವನ್ನು ಮೆದುಳು ಪಡೆಯುತ್ತದೆ, ಸಾಮಾನ್ಯವಾಗಿ 1 ಲೀಟರ್‌ನಷ್ಟು ರಕ್ತ ಪ್ರತಿ ನಿಮಿಷದಲ್ಲಿ ಮೆದುಳಿನಲ್ಲಿ ಸಂಚಾರ ಮಾಡುತ್ತದೆ. ಯಾವುದೆ ರೀತಿಯ ತೊಂದರೆಯಿಂದ ಈ ರಕ್ತಸಂಚಾರದಲ್ಲಿ ಅಡೆ ತಡೆಗಳು ಬಂದಾಗ, ಮೆದುಳಿಗೆ ರಕ್ತ ಸಂಚಾರ ಕಡಿಮೆಯಾಗಿ, ಆ ಭಾಗದ ಮೆದುಳಿಗೆ ಕೆಲಸ ಮಾಡಲು ಅವಶ್ಯಕವಾದ ಆಮ್ಲಜನಕ ಹಾಗು ಪೌಷ್ಠಿಕತೆಯ ಪೂರೈಕೆಯಲ್ಲಿ ಕೊರತೆ ಉಂಟಾಗುತ್ತದೆ ಹಾಗು ಆ ಭಾಗದ ಮೆದುಳಿನ ಜೀವಕೋಶಗಳು ಸಾಯುತ್ತವೆ.

### ಸ್ಟ್ರೋಕ್ ಎಂದರೇನು?
ಹೃದಯದಲ್ಲಾಗುವ ಹೃದಯಾಘಾತದಂತೆ, ಮೆದುಳಿಗಾಗುವ ತೊಂದರೆಯನ್ನು ಸ್ಟ್ರೋಕ್ ಎಂದು ಕರೆಯುತ್ತಾರೆ. ಇದನ್ನು ಬ್ರೈನ್ ಅಟ್ಯಾಕ್ ಅಂತಲೂ ಕರೆಯುತ್ತಾರೆ. (Similar to Heart Attack)

### ಮೆದುಳಿನಲ್ಲಿ ಯಾವ ರೀತಿಯ ರಕ್ತನಾಳದ ತೊಂದರೆಗಳಾಗಬಹುದು?
ಹಲವಾರು ರೀತಿಯ ರಕ್ತನಾಳ ತೊಂದರೆಗಳಾಗಬಹುದು. ಮೆದುಳಿನ ಒಂದು ಭಾಗದ ರಕ್ತ ಸಂಚಾರ ನಿಂತು ಹೋಗಬಹುದು, ಅಡೆತಡೆಗಳಿಂದ ರಕ್ತಸಂಚಾರ ಕಡಿಮೆಯಾಗಬಹುದು (Ischemic Stroke) ರಕ್ತದೊತ್ತಡ ಜಾಸ್ತಿಯಾಗಿ ಮೆದುಳಿನಲ್ಲಿ ರಕ್ತಸ್ರಾವವಾಗಬಹುದು (Hemorrhage stroke). ರಕ್ತನಾಳಗಳು ಬಲೂನಿನಂತೆ ಉಬ್ಬಬಹುದು (Brain Aneurysms). ಮೆದುಳಿನ ಅಪದಮನಿ ಹಾಗು ಅಬಿದಮನಿಗಳು ಒಂದಕ್ಕೊಂದು ಜೋಡಣೆ ಆಗಬಹುದು (Arterio-Venous Fistula). ಸ್ಪೈನಲ್ ಕಾರ್ಡ್‌(Spinal Cord)ನಲ್ಲಿ ಈ ಎಲ್ಲಾ ರೀತಿಯ ತೊಂದರೆಗಳಾಗ ಬಹುದು. ರಕ್ತನಾಳಗಳ ಗುಚ್ಛೆ ಇರಬಹುದು (Arterio-Venous Malformation), ರಕ್ತನಾಳಗಳ ಜೋಡಣೆಯಿಂದ ಕಣ್ಣು ಕೆಂಪಾಗುವುದು ಹಾಗು ಕಣ್ಣು ಊತ ಬರಬಹುದು, ಮಕ್ಕಳಲ್ಲಿ ಮೋಯಾ ಮೋಯಾ ರೋಗ ಹಾಗು ಕೈಕಾಲುಗಳ ಬಲಹೀನತೆ ಬರಬಹುದು.

### ಮೆದುಳಿನ ರಕ್ತನಾಳಗಳ ತೊಂದರೆಗಳನ್ನು ಹೇಗೆ ಗುಣಪಡಿಸಬಹುದು?
ಈ ತೊಂದರೆಗಳನ್ನು ಮೆದುಳಿನ ಶಸ್ತ್ರ ಚಿಕಿತ್ಸೆಯಿಂದ ಹಾಗು ರಕ್ತನಾಳಗಳ ಒಳಗಿನಿಂದ ಸಣ್ಣ ಟ್ಯೂಬ್ ಮತ್ತು ವೈರ್ (Wire) ಗಳನ್ನು ಕಳುಹಿಸಿ, ಹೃದಯದ ತೊಂದರೆಗಳನ್ನು ಆಂಟಿಯೊಪ್ಲಾಸ್ಟಿ ಹಾಗು ಸ್ಟೆಂಟಿಗ್ ಮಾಡುವ ಹಾಗೆ, ಮೆದಳಿನ ರಕ್ತನಾಳಗಳ ಅಡತಡೆಗಳನ್ನು ಗುಣಪಡಿಸಬಹುದು, ರಕ್ತ ನಾಳದಲ್ಲಿರುವ ಬಲೂನ್ ನಂತಹ ಉಬ್ಬುಗಳನ್ನು ರಕ್ತನಾಳಗಳ ಒಳಗಿನಿಂದ ಕಾಯ್‌ಲಿಂಗ್ (Coiling) ಮುಕಾಂತರ ಗುಣಪಡಿಸಬಹುದು ಹಾಗು ರಕ್ತ ಗುಜ್ಜೆ ಹಾಗು ಒಂದಕ್ಕೊಂದು ಜೋಡಣೆ ಗಳನ್ನು, ವೈಜ್ಞಾನಿಕವಾಗಿ ತಯಾರಿಸಿದ ಗೋಂದು (Glue) ಉಪಯೋಗಿಸಿ ಅವುಗಳನ್ನು ಸರಿಪಡಿಸಬಹುದು. ಈ ಎಲ್ಲಾ ತೊಂದರೆಗಳನ್ನು ಒಂದು ಸಣ್ಣ ಮೆಲು ತೊಡೆಯಲ್ಲಿ ಸೂಜಿಯ ಸಹಾಯದಿಂದ ಗುಣಪಡಿಸಬಹುದು.

### ಸ್ಟ್ರೋಕ್‌ನ ಪ್ರಕಾರಗಳಾವುವು ಹಾಗು ಕಾರಣಗಳೇನು? ಎರಡು ಪ್ರಕಾರದ ಸ್ಟ್ರೋಕ್‌ಗಳಿವೆ

ಎ. ಇಸ್ಕಿಮಿಕ್ ಸ್ಟ್ರೋಕ್ (ರಕ್ತ ಸಂಚಾರ ನಿಂತು ಹೋಗಿ/ಕಡಿಮೆಯಾಗಿ ಆಗುವ ತೊಂದರೆ)

ಏ. ಹೆಮರ್‍ರ್ಹೇಜಿಕ್ ಸ್ಟ್ರೋಕ್ (ಉಚ್ಚ ರಕ್ತದೊತ್ತಡದಿಂದ ಆಗುವ ರಕ್ತಸ್ರಾವ / ಅಥವ ರಕ್ತನಾಳದಲ್ಲಾಗುವ ಬಲೂನ್ ಒಡೆದುಕೊಂಡು ಆಗುವ ರಕ್ತಸ್ರಾವ

#### ಕಾರಣಗಳು:

| ಬದಲಿಸಲಾಗದ ಅಪಾಯದ ಅಂಶಗಳು | ಬದಲಿಸಬಹುದಾದ ಅಪಾಯದ ಅಂಶಗಳು |
|---|---|
| • ವಯಸ್ಸು – 60 ನಂತರ • ವಂಶಪಾರಂಪರ್ಯ<br>• ಪೂರ್ವ ಸ್ಟ್ರೋಕ್ (TIA) ಮಿನಿ ಸ್ಟ್ರೋಕ್<br>• ರಕ್ತ ಹೆಪ್ಪುಗಟ್ಟುವ ತೊಂದರೆ | • ಉಚ್ಚ ರಕ್ತದೊತ್ತಡ • ಸೀಗರೇಟು ಸೇವನೆ<br>• ಡಯಬಿಟೀಸ್ (ಮಧುಮೇಹ)<br>• ಮದ್ಯಪಾನ ಸೇವನೆ • ಅತೀ ದೇಹ ತೂಕ<br>• ಅಪೌಷ್ಟಿಕ ಆಹಾರ ಸೇವನೆ<br>• ರಕ್ತದಲ್ಲಿ ಜಾಸ್ತಿ ಕೊಬ್ಬಿನಾಂಶ<br>• ಶಾರೀರಿಕ ಚಟುವಟಿಕೆ ಇಲ್ಲದಿರುವುದು |



**ಡಾ. ಅವಿನಾಶ್ ಕೆ.ಎಂ.**
**ಮೆದುಳು ಶಸ್ತ್ರ ಚಿಕಿತ್ಸಾ ತಜ್ಞ ಹಾಗು ಮೆದುಳಿನ ರಕ್ತನಾಳ ರೋಗಗಳ ತಜ್ಞ ಮೆದುಳಿನ ಕೀ ಹೋಲ್ ಶಸ್ತ್ರ ಚಿಕಿತ್ಸಾ ತಜ್ಞ**

### ನನಗೆ ಸ್ಟ್ರೋಕ್ ಇದೆ ಎಂದು ನಾವು ತಿಳಿದುಕೊಳ್ಳುವುದು ಹೇಗೆ?
ನಿಮಗೆ ಈ ಕೆಳಗಿನ ಯಾವುದೆ ಲಕ್ಷಣಗಳಿದ್ದರೆ ಕೊಡಲೆ ವೈದ್ಯರನ್ನು ಸಂಪರ್ಕಿಸಿ

- ಒಮ್ಮೆಲೆ ನಿಶ್ಯಕ್ತ ಅಥವಾ ಶರೀರದ ಒಂದು ಭಾಗದ ಮುಖ, ತೋಳು ಅಥವಾ ಕಾಲುಗಳಲ್ಲಿ ಬಲಹೀನತೆಯಾಗುವುದು.
- ಒಮ್ಮೆಲೆ ಒಂದು ಕಣ್ಣನಲ್ಲಿ ದೃಷ್ಠಿ ಮಂದವಾಗುವುದು ಅಥವಾ ಕಾಣಸದಿರುವುದು.
- ಮಾತನಾಡಲು ಆಗದಿರುವುದು ಅಥವಾ ಇತರರು ಮಾಡನಾಡುವದನ್ನು ಅರ್ಥಮಾಡಿ ಕೊಳ್ಳಲಾಗದಿರುವುದು.
- ತಿಳಿಯದಿರುವ ಯಾವುದೇ ಕಾರಣಕ್ಕೆ ಒಮ್ಮೆಲೆ
- ಅತಿ ತೀವ್ರವಾದ ತಲೆನೋವಾಗುವುದು
- ವಿವರಿಸಲಾಗದ ತಲೆ ಸುತ್ತು ಬರುವುದು.
- ನಡುಗೆಯಲ್ಲಿ ಅಸ್ಥಿರ ಬಂದು ಬೀಳುವುದು.

**ಕೊಲಂಬಿಯಾ ಏಷ್ಯಾದಲ್ಲಿನ ರಿಯಾಯತಿ ಮತ್ತು ವಿಶೇಷ ಆಂತರಿಕ ಚಿಕಿತ್ಸಾಲಯಗಳು:**

1) **ಕೀಲು ನೋವಿನ ಚಿಕಿತ್ಸಾಲಯ @ 500/–:** ಉಚಿತ ನೋಂದಣಿ, ಎರಡು ಮಂಡಿಗಳು ಮತ್ತು ಸೊಂಟದ ಕ್ಷ–ಕಿರಣ ಮತ್ತು ವಿಶೇಷ ತಜ್ಞರ ಜೊತೆಗೆ ಸಮಾಲೋಚನೆ
2) **ಸ್ತ್ರೀರೋಗ ಶಾಸ್ತ್ರದ ಆರೈಕೆಯ ಚಿಕಿತ್ಸಾಲಯ:** 40 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಪ್ಯಾಕೆಜ್@ 1380/– & 40 ವರ್ಷಕ್ಕಿಂತ ಕೆಳಗಿನವರಿಗೆ@ 900/–
3) **ಆರೋಗ್ಯಕರ ಹೃದಯದ ಚಿಕಿತ್ಸಾಲಯ:** ಹಿರಿಯ ನಾಗರಿಕರಿಗಾಗಿ ಪ್ಯಾಕೇಜ್ @ 349/–& 30–60 ವರ್ಷಗಳ ನಡುವೆ ಇರುವವರಿಗಾಗಿ @ 399/–
4) **ಹೃದಯವಿಜ್ಞಾನದ ಚಿಕಿತ್ಸಾಲಯ @ 500/–:** ಹೃದಯತಜ್ಞರು ಮತ್ತು ಸಿಟಿವಿಎಸ್ ವಿಶೇಷ ತಜ್ಞರೊಂದಿಗೆ ಸಮಾಲೋಚನೆ
5) **ಇಎನ್‌ಟಿ – ಗೊರಕೆ ಮತ್ತು ಮೂಗಿನ ಕುಳಿಗಳ ಚಿಕಿತ್ಸಾಲಯ @ 500/–:** ಉಚಿತ ನೋಂದಣಿ ಮತ್ತು ಇಎನ್‌ಟಿ ವಿಶೇಷ ತಜ್ಞರೊಂದಿಗೆ ಸಮಾಲೋಚನೆ.
6) **ಪ್ರಾಸ್ಟೇಟ್ ಸ್ಕ್ರೀನಿಂಗ್ /ತಪಾಸಣೆ @ 1000/–:** 2 ದಿನ ಕ್ಲಿನಿಕ್‌ನಲ್ಲಿ ಯುರೋಲಾಜಿಸ್ಟ್‌ಗಳಿಂದ ಸೂಕ್ತ ಸಮಾಲೋಚನೆ.
7) **ತೂಕ ನಿರ್ವಹಣೆ @ 500/–:** ಸೂಕ್ತ ಡಯಟಿಷಿಯನ್, ತಜ್ಞ ವೈದ್ಯರು ಮತ್ತು ತೂಕ ನಿರ್ವಹಣಾ ತಜ್ಞರೊಂದಿಗೆ ಸಮಾಲೋಚನೆ.
8) **ಅನೀಮಿಯಾ ಕ್ಲಿನಿಕ್ ಸೇವೆ@ 500/–:** ಉಚಿತ ನೋಂದಣೀ, ಹೆಮಟಲಾಜಿಸ್ಟ್ (ರಕ್ತಪರೀಕ್ಷಕರು) ಮತ್ತು ಪ್ರಸೂತಿ ತಜ್ಞರೊಂದಿಗೆ ಸೂಕ್ತ ಸಮಾಲೋಚನೆ ಸೌಲಭ್ಯ.
9) **ಸ್ಪೈನ್ ಪೈನ್ ಕ್ಲಿನಿಕ್ @ 500/–:** (ಬೆನ್ನುನೋವಿನ ಸಮಸ್ಯೆಗಳ ತಪಾಸಣೆ) (ನರರೋಗ ತಜ್ಞ) ನ್ಯುರೋಲಾಜಿಸ್ಟ್‌ಗಳೊಂದಿಗೆ ಸೂಕ್ತ ಸಮಾಲೋಚನೆ.

COLUMBIA ASIA
INDIA | VIETNAM | MALAYSIA | INDONESIA
BANGALORE | GHAZIABAD | GURGAON | KOLKATA | MYSORE | PATIALA | PUNE

**ಯಾವುದೇ ವಿಶೇಷ ಪ್ಯಾಕೇಜ್‌ಗಾಗಿ, ದಯವಿಟ್ಟು ಕರೆ ಮಾಡಿ**
**09538921615.**